


ನಾಗ ಎಚ್. ಹುಬ್ಳಿ

# ಕಾಂಕೇ ಚಲೋ

ಡಿಸೆಂಬರ್ ರಾತ್ರಿಯ ಚಳಿ ಮೈ ಕೊರೆಯುವಂತಿತ್ತು. ಸಮಯ ಹನ್ನೊಂದು ಗಂಟೆ ದಾಟಿದೆ. ಜಾರ್ಖಂಡ್ ರಾಜಧಾನಿ ರಾಂಚಿಯ ಪಿಸ್ಕಾ ಮೋಡ್ ಬಳಿಯ ಮೀನು ಮಾರುಕಟ್ಟೆ ಸಮೀಪದಲ್ಲಿ ತನ್ನ ಆಟೊ ನಿಲ್ಲಿಸಿಕೊಂಡು, ಮೈಯನ್ನು ಬೆಚ್ಚಗಾಗಿಸುವ ಚಳಿಯಂಗಿ ತೊಟ್ಟು, ತಲೆಗೆ ಮಫ್ಲರ್ ಸುತ್ತಿಕೊಂಡು ಪ್ರಯಾಣಿಕರಿಗಾಗಿ ಕಾಯುತ್ತ, ಹಿಂಬದಿಯ ಸೀಟಿನಲ್ಲಿ ಒರಗಿಕೊಂಡಿದ್ದ ಅಮನ್. ಜನಸಂಚಾರ ಬಹುತೇಕ ಇಲ್ಲವಾಗಿತ್ತು; ಆಗೊಂದು ಈಗೊಂದು ವಾಹನಗಳು ಹಾದುಹೋಗುತ್ತಿದ್ದವು. ಪ್ರಯಾಣಿಕರ ಆಗಮನದ ನಿರೀಕ್ಷೆಯ ನಡುವೆಯೂ ಆತನ ಮನಸ್ಸು, ಆಸ್ಪತ್ರೆಯಲ್ಲಿ ದಾಖಲಾಗಿ ಜೀವನ್ಮರಣದ ನಡುವೆ ಹೋರಾಡುತ್ತಿರುವ ಮಗನ ಬಗ್ಗೆ ಚಿಂತಿತವಾಗಿತ್ತು. ಆರೇಳು ದಿನಗಳ ಹಿಂದೆ ತೀವ್ರ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಏಕೈಕ ಪುತ್ರನನ್ನು ಆಸ್ಪತ್ರೆಗೆ ದಾಖಲಿಸಿದ್ದ. ಆದರೆ ಆತನ ಆರೋಗ್ಯದ ಬಗ್ಗೆ ವೈದ್ಯರು ಏನನ್ನೂ ಸ್ಪಷ್ಟವಾಗಿ ಹೇಳುತ್ತಿರಲಿಲ್ಲ. ಆ ದಿನ ಬೆಳಿಗ್ಗೆ ಸ್ವಲ್ಪ ಗಟ್ಟಿಯಾಗಿ ಕೇಳಿದಾಗ ವೈದ್ಯರು ಹೇಳಿದ್ದರು, “ಈತನದ್ದು ಬಹಳ ವಿಭಿನ್ನ ರೋಗ. ಹಿಡಿತಕ್ಕೆ ಸಿಗುತ್ತಿಲ್ಲ. ಮುಂಬೈ ಅಥವಾ ಕೋಲ್ಕತ್ತಕ್ಕೆ ಕರೆದುಕೊಂಡು ಹೋಗುವುದು ಒಳ್ಳೆಯದು. ನಾಳೆ ಮುಂಬೈ ಆಸ್ಪತ್ರೆಯ